# ಕಣ್ಣಮುಂದೆ ಬ್ರಹ್ಮಾಂಡ!



**2040**ನೇ ಇಸವಿ. ನಿಮ್ಮ ಮಗಳು ಬಂದು, ಆಸ್ಟ್ರಿಯಾ ದೇಶದ ಹುಡುಗನೊಬ್ಬನನ್ನು ತಾನು ಪ್ರೀತಿಸಿರುವುದಾಗಿಯೂ ಅವನನ್ನೇ ಮದುವೆಯಾಗುವುದಾಗಿಯೂ ತಿಳಿಸುತ್ತಾಳೆ. ಹುಡುಗನ ಬಗ್ಗೆ ವಿಚಾರಿಸಿದಾಗ, ಆತನನ್ನು ತಾನು ಕಿಲಿಮಂಜಾರೊ ಪರ್ವತಾರೋಹಣ ಮಾಡುತ್ತಿರುವಾಗ ಭೇಟಿಯಾಗಿದ್ದೆನೆಂದೂ ಅಲ್ಲಿಂದಲೇ ಪ್ರೀತಿ ಅಂಕುರವಾಯಿತೆಂದೂ ಹೇಳುತ್ತಾಳೆ. ನಿಮ್ಮೂರಿನ ಬೆಟ್ಟ ಸರಿಯಾಗಿ ಹತ್ತಿಳಿಯದ ಆಕೆ, ಆಫ್ರಿಕಾದಲ್ಲಿರುವ ಕಿಲಿಮಂಜಾರೊ ಯಾವಾಗ ಹತ್ತಲು ಹೋಗಿದ್ದಳು ಎಂದು ನೀವು ಕೇಳುವುದಿಲ್ಲ. ನಿಮಗೆ ಗೊತ್ತಿದೆ. ಆಕೆ ಈ ಸಾಹಸ ಮಾಡಿದ್ದು 'ಮೆಟಾವರ್ಸ್'ನಲ್ಲಿ.

ನಿಮಗೆ ಹಳೆಯ ನೆನಪುಗಳು ಮರುಕಳಿಸುತ್ತವೆ. ಇಪ್ಪತ್ತೈದು ವರ್ಷಗಳ ಹಿಂದೆ ನೀವೂ ನಿಮ್ಮ ಪಾಲಕರೆದುರು ನಿಮ್ಮ ಮದುವೆಯ ಪ್ರಸ್ತಾಪವಿಟ್ಟಿದ್ದಿರಿ. ಫೇಸ್‌ಬುಕ್ಕಿನಲ್ಲಿ ಪರಿಚಿತಳಾದ ಉತ್ತರ ಭಾರತದ ಹುಡುಗಿಯೊಂದಿಗೆ ವಿವಾಹವಾಗುತ್ತೇನೆಂದು ನೀವು ಹೇಳಿದಾಗ, ನಿಮ್ಮ ಅಪ್ಪ–ಅಮ್ಮ ಬಲು ಆತಂಕಗೊಂಡಿದ್ದರು. ಆಕೆ ಯಾರೋ ಏನೋ ಗೊತ್ತಿಲ್ಲ. ಅವಳ ಮನೆ–ಮನೆತನ ಯಾವುದೂ ನಾವು ಕಂಡಿಲ್ಲ. ಏನೂ ಅರಿಯದೇ ಹೇಗೆ ಒಪ್ಪಿಕೊಳ್ಳುವುದು ಎಂದು ಚಿಂತಿತರಾದ ಅವರಿಗೆ ಕೊಡಲು ಸಮಾಧಾನಕರ ಉತ್ತರಗಳು ನಿಮ್ಮಲ್ಲಿರಲಿಲ್ಲ. ಆದರೆ ಇವತ್ತು ನಿಮ್ಮ ಮಗಳು ಎಲ್ಲದಕ್ಕೂ ಉತ್ತರ ಕೊಡಬಲ್ಲಳು. ಆಕೆ ಮದುವೆ ಆಗಬಯಸುವ ಆ ಹುಡುಗನನ್ನು ಆಕೆ ಭೇಟಿಯಾಗಿರುವುದಷ್ಟೇ ಅಲ್ಲ, ಅವನೊಡನೆ ಸಾಕಷ್ಟು ಸುತ್ತಾಡಿದ್ದಾಳೆ, ಡೇಟಿಂಗ್ ಮಾಡಿದ್ದಾಳೆ. ಅಲ್ಲದೆ ಆತನ ಪಾಲಕರನ್ನು ಆಸ್ಟ್ರಿಯಾದ ಅವರ ಮನೆಯಲ್ಲೇ ಖುದ್ದಾಗಿ ಎದುರು ಕುಳಿತು ಮಾತನಾಡಿಸಿದ್ದಾಳೆ. ಹೀಗೆ ಹತ್ತು ಹಲವು. ಆದರೆ ಇದೆಲ್ಲಾ ಆಗಿದ್ದು 'ಮೆಟಾವರ್ಸ್'ನಲ್ಲಿ! ಭೂಮಿಯ ಮೇಲಿನ ಭೌತಿಕ ಜಗತ್ತಿನಲ್ಲಲ್ಲ.

ದಶಕಗಳ ಹಿಂದೆ, ನಿಮ್ಮ ಫೇಸ್‌ಬುಕ್ ಸಂಪರ್ಕದ ಸಂಗಾತಿಯನ್ನು ಸಮರ್ಥಿಸಿಕೊಂಡಿದ್ದ ನೀವು ಈಗೇನು ಮಾಡುತ್ತೀರಿ? ನಿಮ್ಮ ಮಗಳ ಹಾಗೂ ಆಕೆಯ ಗೆಳೆಯನ ನಡುವಿನ ಅನುಸಂಧಾನವನ್ನು ಸಿಂಧು ಎಂದು ಒಪ್ಪಿಕೊಳ್ಳುತ್ತೀರಾ ಅಥವಾ ತಿರಸ್ಕರಿಸುತ್ತೀರೋ?

ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮೊದಲು, ಈ ನಿಜವಲ್ಲದ ನಿಜ ಲೋಕ 'ಮೆಟಾವರ್ಸ್'ನ ಬಗೆಗೊಂದಿಷ್ಟು ತಿಳಿದುಕೊಳ್ಳೋಣ.

## ಏನಿದು ಮೆಟಾವರ್ಸ್?

ಕೆಲವು ವಾರಗಳ ಹಿಂದೆ, ಮಾರ್ಕ್ ಜುಕರ್‌ಬರ್ಗ್ ತನ್ನ ಕಂಪನಿಯಾದ ಫೇಸ್‌ಬುಕ್ಕಿನ ಹೆಸರನ್ನು 'ಮೆಟಾ' ಎಂದು ಬದಲಾಯಿಸುವುದಾಗಿ ಘೋಷಿಸಿದಾಗಿನಿಂದ ಈ 'ಮೆಟಾವರ್ಸ್' ಎನ್ನುವುದರ ಬಗ್ಗೆ ಭಾರೀ ಚರ್ಚೆ ಶುರುವಾಗಿದೆ. ಗ್ರೀಕ್ ಮೂಲದ 'ಮೆಟಾ' ಅನ್ನುವ ಈ ಶಬ್ದಕ್ಕೆ 'ಆಚೆಯ' (beyond) ಅನ್ನುವ ಅರ್ಥವಿದೆ. ನಾವಿರುವ ಭೂಮಂಡಲದ ಆಚೆಗಿನ ಜಗತ್ತೊಂದನ್ನು ಸೂಚಿಸುವ ಅರ್ಥದಲ್ಲಿ ಅದನ್ನು 'ಮೆಟಾವರ್ಸ್' ಎಂದು ಕರೆದಿರಲಿಕ್ಕೆ ಸಾಕು. ನಾವಿಂದು ಉಪಭೋಗಿಸುತ್ತಿರುವ ಇಂಟರ್ನೆಟ್ಟಿನ ಮುಂದುವರಿದ, ಇನ್ನೊಂದು ಹಂತದ ಸಂಶೋಧನೆಯದು. ಅಂತರ್ಜಾಲ ನಮಗಿಂದು 2ಡಿ ವೇದಿಕೆಯಲ್ಲಿ ಲಭ್ಯವಿದೆ. ಅಲ್ಲಿ ನಾವು ಓದಿ, ನೋಡಿ, ಕೇಳಬಹುದಾದ ಎಲ್ಲವನ್ನೂ ಈ ಮೆಟಾವರ್ಸ್ ನಮಗೆ 3ಡಿ ರೂಪದಲ್ಲಿ ದೈಹಿಕ ಅನುಭವದ ಮುಖೇನ ದೊರಕಿಸಿಕೊಡಬಲ್ಲದು. ಕಣ್ಣಿಗೊಂದು ದಪ್ಪದ ಡಿಜಿಟಲ್ ಕನ್ನಡಕ, ಕೈಲೊಂದು ರಿಮೋಟ್ ಹಿಡಿದು ನಾವು ಆ ಲೋಕದ ಬೀದಿಗಳಲ್ಲಿ ಓಡಾಡಿದ ಅನುಭವ ಪಡೆಯಬಹುದು. ಕನ್ನಡದಲ್ಲಿ 'ಮಿಥ್ಯಾ ವಾಸ್ತವ' ಎಂದು ಕರೆಯಲಾಗುವ ವರ್ಚುವಲ್ ರಿಯಾಲಿಟಿ ಲೋಕವೊಂದನ್ನು ಸೃಷ್ಟಿಸಿ, ಆ ಲೋಕ ಇರಬಹುದಾದ 'ಜಾಗ'ವನ್ನು ಮೆಟಾವರ್ಸ್ ಎಂದು ಕರೆಯಬಹುದು.

ಇಂದು ಆನ್‌ಲೈನ್ ಗೇಮ್‌ನಲ್ಲಿ ಏನೆಲ್ಲಾ ಮಾಡಲು ಸಾಧ್ಯ ಎಂಬುದನ್ನು ನಾವು ಬಲ್ಲೆವು. ಈ 'ಮೆಟಾವರ್ಸ್'ನ ಸಾಧ್ಯತೆಗಳು ಅದನ್ನೆಲ್ಲಾ ಮೀರಿದ್ದು. ಈಜಿಪ್ಟಿನ ಪಿರಮಿಡ್ಡಿನ ಎದುರು ನಿಂತು ನೀವು ಅದರ ಅಗಾಧತೆಯನ್ನು ಅನುಭವಿಸಬೇಕೆ? ಯುರೋಪಿನ ಹಿಮದ ಬಯಲಲ್ಲಿ ಸ್ಕೀಯಿಂಗ್ ಮಾಡಬೇಕೇ? ನ್ಯೂಯಾರ್ಕಿನ ಯಾಂಕೀ ಸ್ಟೇಡಿಯಮ್ಮಿನಲ್ಲಿ ಕುಳಿತು ಬೇಸ್‌ಬಾಲ್ ಪಂದ್ಯ ನೋಡಬೇಕೇ? ಇವನ್ನೆಲ್ಲಾ ನೀವು ಕುಂತಲ್ಲಿಯೇ ಮಾಡಬಹುದು. ಚಂದ್ರ, ಗುರು ಮಂಗಳ ಲೋಕಕ್ಕೂ ಹೋಗಿ ಅನ್ಯಗ್ರಹದ ಜೀವಿಗಳನ್ನೂ ಭೇಟಿಯಾಗಬಹುದು. ವಾಲ್‌ಮಾರ್ಟಿನ ಶಾಪಿಂಗ್ ಮಾಲಿನಲ್ಲಿ ಖುದ್ದು ಸಂಚರಿಸಿ ವಸ್ತುಗಳನ್ನು ಕೊಳ್ಳಬಹುದು. ಜಗತ್ತಿನ ಯಾವ್ಯಾವುದೋ ಮೂಲೆಯಲ್ಲಿರುವ